ಆ) ಈ ಶಾಲೆಯಲ್ಲಿ ಸಾಕಷ್ಟು ಕೊಠಡಿಗಳು ಇಲ್ಲದಿರುವುದು, ನೀರು, ವಿದ್ಯುತ್‌ದೀಪ, ಶೌಚಾಲಯಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಶಾಲೆಯಲ್ಲಿನ ತೊಂದರೆಗಳನ್ನು ಕ್ಷೇತ್ರದ ಶಾಸಕ, ಶಾಲೆಯ ಆಡಳಿತ ವರ್ಗ ಮತ್ತು ಸಾರ್ವಜನಿಕರು ಆಗಿಂದಾಗ್ಗೆ ಸರ್ಕಾರದವರ ಗಮನಕ್ಕೆ ತಂದಿದ್ದಾರೆಯೇ ?

ಈ) ಹಾಗಿದ್ದಲ್ಲಿ, ಈ ತೊಂದರೆಗಳನ್ನು ಕೂಡಲೇ ನಿವಾರಿಸಲು ಸರ್ಕಾರದವರು ಕೈಗೊಂಡ ಅಥವಾ ಕೈಗೊಳ್ಳುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಆ) ಶಿರ್ಷ್.

ಆ) ಬಂದಿದೆ.

ಇ) ತಂದಿದ್ದಾರೆ.

ಈ) ಕಟ್ಟಡದ ದುರಸ್ತಿ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಗೆ ಸೂಚನೆ ನೀಡಿದೆ.

ಸರಕಾರಿ ವಸತಿ ಗೃಹದಲ್ಲಿರುವವರ ಕುಂದು ಕೊರತೆಗಳನ್ನು ನಿವಾರಿಸುವ ಬಗ್ಗೆ

೧೨೬ (ಳಳರಿ ಎ) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕಳೆದ ಸಾಲಿನಲ್ಲಿ ಬೆಂಗಳೂರಿನ ವಿಲ್ಸನ್‌ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ವಸತಿ ಗೃಹಗಳಲ್ಲಿರುವವರ ತೊಂದರೆಗಳನ್ನು ಪರಿಶೀಲಿಸಲು ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಬಂದಿದ್ದು ನಿಜವಲ್ಲವೆ ?

ಆ) ಪಟ್ಟಿಯ ಭೇಟಿಯ ಕಾಲದಲ್ಲಿ ನಿವಾಸಿಗಳ ಕುಂದು ಕೊರತೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ಆದೇಶ ನೀಡಿದ ಕೆಲಸ ಕಾರ್ಯಗಳಾವುವು ?

ಇ) ಆವರ ಆದೇಶದಂತೆ ಇದುವರೆಗೂ ಸದರಿ ವಸತಿ ಗೃಹಗಳಲ್ಲಿ ಕೈಗೊಂಡಿರುವ ಕೆಲಸ ಕಾರ್ಯಗಳಾವುವು? (ರಾಜಾಜಿನಗರ ಹಾಗೂ ಹೊಂಬೇಗೌಡ ನಗರದಲ್ಲಿ ಕೈಗೊಂಡಿರುವ ಕೆಲಸಗಳ ಪ್ರತ್ಯೇಕ ಪಟ್ಟಿ ನೀಡುವುದು) ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ನಿಜ. ಮಾನ್ಯ ಲೋಕೋಪಯೋಗಿ ಸಚಿವರು ಈ ಮನೆಗಳ ಪರಿಶೀಲನೆ ಮಾಡಿದ್ದಾರೆ.

ಆ) ಕಳಗೆ ಕಾಣಿಸಿರುವ ಕೆಲಸಗಳಿಗೆ ಸಂಬಂಧಿಸಿದಂತೆ ಆದೇಶ ನೀಡಲಾಗಿದ್ದು ತು.

ರಾಜಾಜಿನಗರದಲ್ಲಿರುವ ಮನೆಗಳಿಗೆ

೧) ಸರ್ವೋಪಯೋಗಿ ವಿದ್ಯುತ್ ಸಂಪರ್ಕ ಏರ್ಪಡಿಸಂವುದು

೨) ಶೌಚಾಲಯದ ಸ್ಥಳಾಂತರ ಮತ್ತು ಅಭಿವೃದ್ಧಿ.

೩) ಆವರಣ ಗೋಡೆ ಮತ್ತು ಒಳಚರಂಡಿ ವ್ಯವಸ್ಥೆ ದುರಸ್ತಿ.

ವಿಲ್ಸನ್‌ಗಾರ್ಡನ್ಸ್ (ಹೊಂಬೇಗೌಡನಗರ) ಮನೆಗಳಿಗೆ

೧) ನೀರು ಸರಬರಾಜು ವ್ಯವಸ್ಥೆ ಉತ್ತಮಪಡಿಸಲು ನಿರೆತ್ತುಪ ಯಂತ್ರಗಳನ್ನು ಅಳವಡಿಸುವುದು ಮತ್ತು ಹಳೇ ಕೊಳಾಯಿಗಳನ್ನು ಬದಲಾಯಿಸುವುದು.

೨) ಆವರಣಗೋಡೆಗಳ ದುರಸ್ತಿ.

೩) ಶೌಚಾಲಯಗಳು ಮತ್ತು ಸ್ನಾನದ ಕೊಠಡಿಗಳ ದುರಸ್ತಿ.

೫) ರಾಜಾಜಿನಗರದ ವಾಸದ ಮನೆಗಳಿಗೆ ಸಂಬಂಧಿಸಿದಂತೆ ಕೆಳಗೆ ನಮೂದಿಸಿದ ಕೆಲಸಗಳು ಪ್ರಾರಂಭಿಸಲಾಗಿದೆ

೧) ಸರ್ವೋಪಯೋಗಿ ವಿದ್ಯುತ್ ಸಂಪರ್ಕ ಏರ್ಪಡಿಸುವ ಕೆಲಸ (ಎ.ಇ.ಹೆಚ್.)

ಹೊಂಬೆಗೌಡನಗರದ ವಾಸದ ಮನೆಗಳಿಗೆ ಸಂಬಂಧಿಸಿದಂತೆ ಕೆಳಗೆ ನಮೂದಿಸಿದ ಕೆಲಸಗಳು ಪ್ರಾರಂಭಿಸಲಾಗಿದೆ

೧) ಹೊಸ ನೀರೆತ್ತುವ ಯಂತ್ರಗಳನ್ನು ಅಳವಡಿಸುವ ಮೂಲಕ ನೀರು ರನಬರಾಜು ವ್ಯವಸ್ಥೆ ಸುಧಾರಣೆ ಕೆಲಸಗಳು, ಹಾಗೂ ಹಳೇ ಕೊಳಾಯಿಗಳನ್ನು ಬದಲಾಯಿಸುವ ಕೆಲಸಗಳು.

೨) ಆವರಣ ಗೋಡೆಗಳ ದುರಸ್ತಿ ಕೆಲಸಗಳು.

೩) ಶೌಚಾಲಯ ಮತ್ತು ಸ್ನಾನದ ಕೊಠಡಿಗಳ ದುರಸ್ತಿ ಕೆಲಸಗಳು.

ಬಿಜಾಪುರ ಜಿಲ್ಲೆ ಮುಳವಾಡ ಏತ ನೀರಾವರಿ ಬಗ್ಗೆ

೧೨೩. (ಳಳಳ) ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್ (ಸಂಕೇಶ್ವರ) :—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನಿರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಿಜಾಪುರ ಜಿಲ್ಲೆ ಮುಳವಾಡ ಏತ ನೀರಾವರಿ ಯೋಜನೆಗೆ ಮಾನ್ಯ ಮುಖ್ಯ ಮಂತ್ರಿಗಳು ಅಡಿಗಲ್ಲು ಹಾಕಿದ್ದು ಯಾವಾಗ ?

ಆ) ಈ ಯೋಜನೆಗೆ ರಾಜ್ಯದ ಅಂದಾಜು ಪಟ್ಟಿಯಲ್ಲಿ ಒದಗಿಸಿರುವ ಹಣವೆಷ್ಟು ?

ಇ) ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು ?

ಈ) ಈ ಯೋಜನೆಯಿಂದ ನೀರಾವರಿಯಾಗುವ ಪ್ರದೇಶ ವಿಸ್ತೀರ್ಣವೆಷ್ಟು ಮತ್ತು ಯಾವ ಯಾವ ತಾಲ್ಲೂಕಿಗೆ ನೀರಾವರಿಯಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) :—

ಅ) ಅಡಿಗಲ್ಲನ್ನು ೮-೧೨-೧೯೮೬ ರಂದು ಹಾಕಲ್ಪಟ್ಟಿತು.

ಆ) ಕೃಷ್ಣಾ ಮೇಲ್ದಂಡೆಯ ಯೋಜನೆಯಡಿಯಲ್ಲಿ ರೂ. ೫,೦೦ ಲಕ್ಷ ರೂ. ಗಳ ಅನುದಾನವನ್ನು ೧೯೮೬-೮೭ನೇ ಸಾಲಿನಲ್ಲಿ ಒದಗಿಸಲಾಗಿದೆ.

ಇ) ಈ ಯೋಜನೆಯ ಹೆಡ್ ವರ್ಕ್ಸ್ ಕಾಮಗಾರಿಗಳನ್ನು ೧೯೯೧-೯೨ ರ ಅವಧಿಯ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ಈ) ಯೋಜನೆಯ ಸರ್ವೆ ಕಾರ್ಯ ನಡೆದಿದ್ದು ಯೋಜನಾವರದಿ ಇನ್ನೂ ತಯಾರಾಗಬೇಕಾಗಿದೆ.

ಬಿತ್ತನೆ ಬೀಜಗಳ ಹಂಚಿಕೆಯಲ್ಲಿನ ಅವ್ಯವಸ್ಥೆಯ ಬಗ್ಗೆ

೧೩೮(೪೧೮) ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಬಿತ್ತನೇ ಬೀಜ ವಾರಾಟ ಮಾಡುವ ಸಹಕಾರಿ ಸಂಸ್ಥೆಗಳಾವುವು ? (ಸರಕಾರದ ಸ್ವಾಮ್ಯ, ಹಾಗೂ ಅಧಿಕೃತ ಖಾಸಗಿ ವ್ಯಾಪಾರಸ್ಥರುಗಳ ಹೆಸರುಗಳನ್ನು ತಿಳಿಸುವುದು),

ಆ) ಮೇಲ್ಕಂಡ ಸಂಸ್ಥೆಗಳು ಖಾರೀದಿ ಮಾಡಿದ ಹಾಗೂ ಸರಿಯಾಗಿ ಮೊಳಕೆ ಬಾರದ ಬಿತ್ತನೆ ಬೀಜಗಳನ್ನು ಮಾಡುತ್ತಿರುವರೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ?